ಸಿಸಿ ನಂಃ 3596/2023
ಸಿ.ಡಬ್ಲ್ಯು 3/ಪಿ.ಡಬ್ಲ್ಯು 3

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 3596/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಇಲಾಹಿತ ಕೊಣ್ಣೂರ |
| ತಂದೆಯ ಹೆಸರು | ಃ | ಮಾಬುಸಾಬ @ ಮಾಬುಲಿ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಪೆಟಿಂಗ್ |
| ವಾಸ ಸ್ಥಳ | ಃ | ನವಲೂರ ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 18-01-2025

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಪೊಲೀಸರು 2023 ರಲ್ಲಿ ಸಂಜೆ ಪೊಲಿಸರು ನವಲೂರಿನ ಮಸಿದಿಯ ಮುಂದೆ ಜಗಳ ವಾಗಿರುತ್ತೆ ಎಂದು ಪಂಚನಾಮೆ ಮಾಡಿ 2 ಕಟ್ಟಿಗೆಯನ್ನು ಜಪ್ತು ಮಾಡಿರುತ್ತಾರೆ. ಇನ್ನೊಬ್ಬ ಪಂಚ ಯಾರಿದ್ದರು ಎಂದು ನೆನಪಿರುವುದಿಲ್ಲ. ಈಗ ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಚಾಸಾ.1 ಘಟನಾ ಸ್ಥಳವನ್ನು ತೋರಿಸಿರುತ್ತಾರೆ. 2 ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೆನೆ. ಈಗ ನೋಡುತ್ತಿರು 2 ಕಟ್ಟಿಗೆಗಳ ಪೈಕಿ ಒಂದು ಪಳಿಯ ಸ್ವರೂಪದಿದ್ದ ಪಟ್ಟಿ ಬಡಿಗೆಯನ್ನು ನೋಡಿರುವುದಿಲ್ಲ ಮತ್ತೊಂದು ಚೈಕಾಕಾರ ಕಟ್ಟಿಗೆಯನ್ನು ಜಪ್ತು ಮಾಡಿರುತ್ತಾರೆ ಅದನ್ನು ಎಮ್ ಓ 1 ಎಂದು ಗುರುತಿಸಲಾಯಿತು. ಅದಕ್ಕೆ ನಾನು ಸಹಿ ಮಾಡಿದ ಚೀಟಿ ಅಂಟಿಸಿರುತ್ತಾರೆ. ಚೀಟಿಯನ್ನು ಎಮ್ ಓ.1(ಎ) ಎಂದು, ಮತ್ತು ಸಹಿಯನ್ನು ಎಮ್ ಓ.1(ಬಿ) ಎಂದು ಗುರುತಿಸಲಾಯಿತು.

**ಹಿರಿಯ ಸರಕಾರಿ ಅಬಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಪಾಟೀ ಸವಾಲಿಗೆ ಅನೂಮತಿ ನೀಡಲಾಯಿತು.**

ಸಿಸಿ ನಂಃ 3596/2023
ಸಿ.ಡಬ್ಲ್ಯೂ 3/ಪಿ.ಡಬ್ಲ್ಯೂ 3

**ಪಾಟೀ ಸವಾಲುಃ ಹಿಸಅಅ ರವರಿಂದ**

ಒಂದು ಪಳಿಯ ಸ್ವರೂಪದಿದ್ದ ಪಟ್ಟಿ ಬಡಿಗೆಯನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ನನ್ನ ಮತ್ತು ಚಾಸಾ.2 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಜಪ್ತು ಮಾಡಿರುತ್ತಾರೆ ಎಂದರೆ ನೆನಪಿರುವುದಿಲ್ಲ. ಈಗ ತೋರಿಸಿದ ಒಂದು ಪಳಿಯ ಸ್ವರೂಪದಿದ್ದ ಪಟ್ಟಿ ಬಡಿಗೆಯನ್ನು ಪೊಲೀಸರು ಪಂಚನಾಮೆಯ ಎಮ್ ಓ.2 ರ ಜೊತೆಗೆ ಅದನ್ನುಕೂಡಾ ಸ್ಥಳದಲ್ಲಿ ಜಪ್ತು ಮಾಡಿರುತ್ತಾರೆ ಎಂದರೆ ಸರಿ. ಅದಕ್ಕೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿ. ಅದನ್ನು ಎಮ್ ಓ.2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಚಾಸಾ.2 ರವರು ಹಾಜರಿದ್ದರು ಎಂದರೆ ಸರಿ. ಆತನು ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ಮದ್ಯಾಹ್ನ 3 ರಿಂದ 4.15 ರವರೆಗೆ ಮಾಡಿರುತ್ತಾರೆ ಎಂದರೆ ಸರಿ.

**ಆರೋಪಿತ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.